RNU AIR DHARWAD

# DECEMBER 05, 2025
## AKASHAVANI - DHARWAD
## PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಕೇಂದ್ರ ಪ್ರವಾಸೋದ್ಯಮ ಸಚಿವಾಲಯ, ಎರಡನೇ ಆವೃತ್ತಿಯ, 'ಸ್ವದೇಶ ದರ್ಶನ' ಯೋಜನೆಯಡಿ, 25 ಕೋಟಿ 64 ಲಕ್ಷ ರೂಪಾಯಿ ವೆಚ್ಚದಲ್ಲಿ, ವಿಜಯನಗರ ಜಿಲ್ಲೆಯ ಹಂಪಿಯಲ್ಲಿ, ಪ್ರವಾಸಿಗರ ಬಹು ಸೌಲಭ್ಯ ತಾಣ – ಟ್ರಾವೆಲರ್ಸ್ ನೂಕ್‌ಗೆ ಮಂಜೂರಾತಿ ನೀಡಿದೆ. ಕೇಂದ್ರ ಪವಾಸೋದ್ಯಮ ಖಾತೆ ಸಚಿವ, ಗಜೇಂದ್ರಸಿಂಗ್ ಶೇಖಾವತ್, ರಾಜ್ಯಸಭೆ ಸಂಸದ ನಾರಾಯಣ ಕೋರಗಪ್ಪ ಅವರು ಕೇಳಿದ ಪ್ರಶ್ನೆಗೆ, ಪ್ರಶ್ನೋತ್ತರ ಕಲಾಪದಲ್ಲಿ, ಉತ್ತರಿಸಿದರು. ಕರ್ನಾಟಕ ಸರ್ಕಾರ, ಪ್ರವಾಸೋದ್ಯಮ ಮೂಲಸೌಕರ್ಯ ನಿಗಮವನ್ನು ರಾಜ್ಯ ಅನುಷ್ಠಾನ ಸಂಸ್ಥೆಯಾಗಿ ನೇಮಿಸಿದೆ. 2026ರ ಮಾರ್ಚ್ ಒಳಗೆ ಪೂರ್ಣಗೊಳಿಸುವಂತೆ, ರಾಜ್ಯ ಸರ್ಕಾರಕ್ಕೆ ಕೇಂದ್ರ ನಿರ್ದೇಶನ ನೀಡಿದೆ, ಎಂದು ತಿಳಿಸಿದ್ದಾರೆ.

<><><>

ಹೊಸ ದಿಲ್ಲಿಯ, ನೂತನ ಸಂಸತ್ ಭವನದ ಕಚೇರಿಯಲ್ಲಿ, ಕೇಂದ್ರ ರೇಲ್ವೆ ಖಾತೆ ಸಚಿವ ಅಶ್ವಿನಿ ವೈ ್ಣವ್ ಅವರನ್ನು, ಬೆಳಗಾವಿ ಸಂಸದ ಜಗದೀಶ ಶೆಟ್ಟರ, ಭೇಟಿ ಮಾಡಿ, ಬೆಳಗಾವಿ ರೈಲು ನಿಲ್ದಾಣಕ್ಕೆ, ಶ್ರೀ ಶಿವಬಸವ ಸ್ವಾಮೀಜಿ ಹೆಸರನ್ನು ನಾಮಾಂಕಿತ ಗೊಳಿಸುವಂತೆ, ಮನವಿ ಸಲ್ಲಿಸಿದರು. ಬೆಳಗಾವಿ, ಬೆಂಗಳೂರು ಮಧ್ಯೆ ಸಂಚರಿಸುವ, ವಂದೇ ಭಾರತ ರೈಲು, ಬೆಳಗಾವಿಯಿಂದ ನಿರ್ಗಮಿಸುವ ಸಮಯವನ್ನು ಬೆಳಗ್ಗೆ 5.20ರ ಬದಲಾಗಿ 6.15ಕ್ಕೆ ಪರಿವರ್ತಿಸುವ ಕುರಿತು, ಪ್ರಯಾಣಿಕರ ಪರವಾಗಿ, ಸಂಸದ ಶೆಟ್ಟರ ಕೋರಿದರು. ಬೆಂಗಳೂರು – ಬೆಳಗಾವಿ – ಮುಂಬೈ ನಡುವೆ, ಶೀಘ್ರ ಸೂಪರ್ ಫಾಸ್ಟ್ ರೈಲು, ಲೋಕಾಪೂರ – ರಾಮದುರ್ಗ – ಸವದತ್ತಿ – ಧಾರವಾಡ ನಡುವೆ, ನೂತನ ರೈಲು ಮಾರ್ಗ ನಿರ್ಮಾಣಕ್ಕೆ ಸಮೀಕ್ಷೆ ಕೈಗೊಳ್ಳಲು, ಅಶ್ವಿನಿ ವೈ ್ಣವ್ ಹಾಗೂ ವಿ.ಸೋಮಣ್ಣ ಅವರೊಂದಿಗೆ, ಚರ್ಚಿಸಲಾಯಿತು ಎಂದು, ಸಂಸದ ಶೆಟ್ಟರ ತಿಳಿಸಿದ್ದಾರೆ.

<><><>

ಇಂದು, ವಿಶ್ವ ಮಣ್ಣು ದಿನಾಚರಣೆ. "ಆರೋಗ್ಯಕರ ನಗರಗಳಿಗೆ, ಆರೋಗ್ಯಕರ ಮಣ್ಣು" ಧ್ಯೇಯದೊಂದಿಗೆ, ನಗರಗಳಲ್ಲಿ ಮಣ್ಣಿನ ಪಾತ್ರ, ನಗರೀಕರಣದಿಂದ ಉಂಟಾಗುವ, ಮಣ್ಣಿನ ಸವಕಳಿಯ ಸವಾಲುಗಳ ಮೇಲೆ, ಈ ದಿನಾಚರಣೆ ಕೇಂದ್ರೀಕರಿಸಿದೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ 'ಮಣ್ಣಿನ ಪ್ರದರ್ಶನಾಲಯಗಳ' ನಿರ್ಮಾಣದ ಅಗತ್ಯತೆ ಕುರಿತು, ಮಣ್ಣು ರಾಯಭಾರಿ ಎಂದೇ ಹೆಸರಾಗಿದ್ದ ಸಾಯಿಲ್ ವಾಸು– ಪಿ. ಶ್ರೀನಿವಾಸ ಅವರು ಹೊಂದಿದ್ದ, ದೂರದೃಷ್ಟಿ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಬೆಂಗಳೂರಿನ ಹಿರಿಯ ಪತ್ರಕರ್ತ, ಗಾಣಧಾಳು ಶ್ರೀಕಂಠ...

<><><>

ಶ್ರೀಕಂಠ ಗಾಣಧಾಳು ಧ್ವನಿ 40 ಸೆಕೆಂದುಗಳು

<><><>

ಶ್ರೀ ದತ್ತ ಜಯಂತಿ ಅಂಗವಾಗಿ, ಬೆಂಗಳೂರು ವಸಂತ ಪುರದಲ್ಲಿರುವ ಶ್ರೀ ಸಾಯಿ ಆಧ್ಯಾತ್ಮಿಕ ಕೇಂದ್ರದ ಮಂದಿರದಲ್ಲಿ, ಶ್ರೀ ದತ್ತ ದೇವರಿಗೆ ವಿಶೇಷ ಅಲಂಕಾರ ಪೂಜೆ ವಿಜೃಂಭಣೆಯಿಂದ ಆಚರಿಸಲಾಯಿತು. ಸುಮಾರು ಎರಡು ಸಾವಿರ ಭಕ್ತರು ದೇವರ ದರ್ಶನ ಪಡೆದು ಮಹಾ ಪ್ರಸಾದ ಸ್ವೀಕರಿಸಿದರು.

<><><>

ಧಾರವಾಡ ಜಿಲ್ಲೆಯ ಸರ್ಕಾರಿ ಕಚೇರಿಗಳಲ್ಲಿ, ಡಿಸೆಂಬರ್ 6 ರಂದು ಸಂವಿಧಾನ ಶಿಲ್ಪಿ ಡಾಕ್ಟರ ಬಿ.ಆರ್ ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ದಿನವನ್ನು ಕಡ್ಡಾಯವಾಗಿ ಆಚರಿಸುವಂತೆ ಜಿಲ್ಲಾಧಿಕಾರಿ ದಿವ್ಯಾಪ್ರಭು ನಿರ್ದೇಶನ ನೀಡಿದ್ದಾರೆ. ನಾಳೆ ಬೆಳಗ್ಗೆ 10 ಗಂಟೆಗೆ ಎಲ್ಲ ಕಚೇರಿಗಳಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಮರ್ಪಿಸಬೇಕು ಎಂದು ಸೂಚಿಸಿದ್ದಾರೆ.

<><><>

ಶಿವಮೊಗ್ಗ ಹಾಗೂ ಮಲೆನಾಡು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ, ಅಡಕೆ ಬೆಳೆಗಾರರು ಎದುರಿಸುತ್ತಿರುವ, ಗಂಭೀರ ಸಮಸ್ಯೆಗಳ ಕುರಿತು, ಸಂಸದ ಬಿ.ವೈ.ರಾಘವೇಂದ್ರ, ಲೋಕಸಭೆಯ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದರು. ಅಡಕೆ ಬೆಳೆಗೆ ಹಳದಿ ಎಲೆ ರೋಗ, ಎಲೆ ಚುಕ್ಕೆ ರೋಗಗಳ ಜೊತೆಗೆ, ಕಳೆದ 4 ತಿಂಗಳಿಂದ ಸುರಿದ ಭಾರಿ ಮಳೆಯಿಂದ, ಫಸಲಿನ ಶೇಕಡ 25ರಷ್ಟು ಮಾತ್ರ, ಕೈಗೆಟಕುವ ಸ್ಥಿತಿ ಎದುರಾಗಿದೆ ಎಂದು, ಸಂಸತ್ತಿಗೆ ವಿವರಿಸಿದರು. ಬೆಳೆ ವಿಮೆ ಯೋಜನೆ ಅನುಷ್ಠಾನದಲ್ಲಿ ತೊಂದರೆ, ಹಿನ್ನೆಲೆ, ಅಡಕೆ ಬೆಳೆಗಾರರಿಗೆ 2024–25ನೇ ಸಾಲಿನ ಪರಿಹಾರವನ್ನು, ಮರು ಲೆಕ್ಕ ಹಾಕುವಂತೆ, ವಿಶೇಷ ಪ್ಯಾಕೇಜ್ ನೀಡುವ ಕುರಿತು ಪರಿಶೀಲಿಸುವಂತೆ, ಕೇಂದ್ರಕ್ಕೆ ಮನವಿ ಮಾಡಿದರು.

<><><>

ಕೃಷಿ ಇಲಾಖೆ, ಕಳೆದ ಏಪ್ರಿಲ್ ನಿಂದ, ಇಲ್ಲಿಯ ವರೆಗೂ, ಮಂಡ್ಯ ಜಿಲ್ಲೆಯಲ್ಲಿ, ವಿವಿಧ ಯೋಜನೆಗಳಡಿ, ರೈತರಿಗೆ, 2 ಸಾವಿರದ 3 ನೂರಾ 90 ಲಕ್ಷ 80 ಸಾವಿರ ರೂಪಾಯಿಗಳ ಸಹಾಯ ಧನ ಒದಗಿಸಿದೆ ಎಂದು, ಮಂಡ್ಯ ಜಿಲ್ಲೆ ಉಸ್ತುವಾರಿ ಸಚಿವ, ಎನ್. ಚಲುವರಾಯಸ್ವಾಮಿ, ತಿಳಿಸಿದ್ದಾರೆ. ಮಂಡ್ಯ ಜಿಲ್ಲೆಯ ಕೊಪ್ಪದಲ್ಲಿ, ಜನ ಸ್ಪಂದನ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>